ಮೂಲ ದಾವಾ ಸಂಖ್ಯೆ. 131/2017 ಡಿ ಡಬ್ಲ್ಯೂ 1

(ದಿನಾಂಕ 18-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ನನ್ನ ಮೂಲ ವಾಸಸ್ಥಳ ಸೊನ್ನ ಎಂದರೆ ಸರಿ. ನಾನು ಈಗ ಮುಟುಕನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನಾನು ಯಾವ ಇಸ್ವಿಯಲ್ಲಿ ಮುಟುಕನಹಳ್ಳಿ ಗ್ರಾಮಕ್ಕೆ ಬಂದಿರುತ್ತೇನೆಂದು ನನಗೆ ಹೇಳಲು ಬರುವುದಿಲ್ಲ ಆದರೆ ನಾನು ಈಗ 40 ವರ್ಷದ ಹಿಂದೆ ಮುಟುಕನಹಳ್ಳಿ ಗ್ರಾಮಕ್ಕೆ ಬಂದಿರುತ್ತೇನೆ. ನಾನು ಸೊನ್ನ ಗ್ರಾಮದಿಂದ ನನ್ನ ಹೆಂಡತಿ, ಮಕ್ಕಳು ಹಾಗೂ ತಂದೆಯೊಂದಿಗೆ ಮುಟುಕನಹಳ್ಳಿ ಗ್ರಾಮಕ್ಕೆ ಬಂದಿರುತ್ತೇನೆ. ನನ್ನ ತಾಯಿ ಸೊನ್ನ ಗ್ರಾಮದಲ್ಲಿ ಉಳಿದಿರುತ್ತಾರೆ. ನನ್ನ ತಮ್ಮಂದಿರು ಮತ್ತು ತಂಗಿ ಸೊನ್ನ ಗ್ರಾಮದಲ್ಲಿ ಉಳಿದಿರುತ್ತಾರೆ. ಆ ಸಮಯದಲ್ಲಿ ನನ್ನ ತಂದೆಯವರು ಆರೋಗ್ಯವಾಗಿದ್ದರು. ಸೊನ್ನ ಗ್ರಾಮದಲ್ಲಿದ್ದಾಗ ನಾನು, ನನ್ನ ಸಹೋದರ ಸಹೋದರಿಯರು ಮತ್ತು ನನ್ನ ತಂದೆ ತಾಯಿ ಕೂಡು ಕುಟುಂಬದಲ್ಲಿ ವಾಸವಾಗಿದ್ದೆವು. ಆ ಸಮಯದಲ್ಲಿ ನನ್ನ ತಮ್ಮಂದಿರ ಮದುವೆಯಾಗಿರಲಿಲ್ಲವೆಂದರೆ ಸರಿ. ಆ ಸಮಯದಲ್ಲಿ ನನ್ನ ಮದುವೆಯಾಗಿತ್ತು. ನನ್ನ ಮದುವೆಯಾದ ನಂತರ ನಾನು ಮುಟುಕನಹಳ್ಳಿ ಗ್ರಾಮಕ್ಕೆ ಬಂದಿರುತ್ತೇನೆ.

ನಿಡಿ-3 ಮೂಲ ದಾಖಲೆ ನಮ್ಮ ಮನೆಯಲ್ಲಿದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಿಡಿ-3 ದಾಖಲೆಯಲ್ಲಿ ನನ್ನ ವಿಳಾಸ ಸೊನ್ನ ಗ್ರಾಮ ಅಂತಾ ನಮೂದು ಇದೆ ಎಂದರೆ ಸರಿ. ನಾನು ಸೊನ್ನ ಗ್ರಾಮದಲ್ಲಿದ್ದಾಗ ನಿಡಿ-3 ರ ಆಸ್ತಿಯನ್ನು ಖರೀದಿ ಮಾಡಿರುತ್ತೇನೆಂದರೆ ಸರಿಯಲ್ಲ ನಾನು ಮುಟುಕನಹಳ್ಳಿ ಗ್ರಾಮದಲ್ಲಿದ್ದಾಗ ಖರೀದಿ ಮಾಡಿದ್ದೇನೆ ಎನ್ನುತ್ತಾರೆ. ಸದರಿ ನಿಡಿ-3 ದಾಖಲೆಯಲ್ಲಿ ಮುಟುಕನಹಳ್ಳಿ ಗ್ರಾಮದ ವಿಳಾಸವನ್ನು ಬರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ದಾವಾಸ್ತಿಯು ನಾವು ಕೂಡು ಕುಟುಂಬದಲ್ಲಿದ್ದಾಗ ನಮ್ಮ ತಂದೆಯವರು ನನ್ನ ಹೆಸರಿಗೆ ಖರೀದಿ ಮಾಡಿರುತ್ತಾರೆಂದರೆ ಸುಳ್ಳು.

ನಮ್ಮ ತಂದೆ ತಾಯಿಗೆ ನಾನೇ ಹಿರಿಯ ಮಗ. ನಾವು ಸೊನ್ನ ಗ್ರಾಮದಲ್ಲಿದ್ದಾಗ ನಮ್ಮ ತಂದೆ ತಾಯಿಯವರು ದುಡಿಮೆ ಮಾಡುತ್ತಾ ಹೋಗುತ್ತಿದ್ದರು ಎಂದರೆ ಸರಿ. ಸೊನ್ನ ಗ್ರಾಮದಲ್ಲಿ ನನ್ನ ಸಹೋದರ ಸಹೋದರಿಯರು ನನ್ನ ಜೊತೆಯಲ್ಲಿದ್ದರು ಎಂದರೆ ಸರಿ. ನಮ್ಮ ಕುಟುಂಬದ ನಿರ್ವಹಣೆಯನ್ನು ನಮ್ಮ ತಂದೆಯವರು ಮಾಡುತ್ತಿದ್ದರು ಎಂದರೆ ಸರಿ. ನನ್ನ ಮದುವೆಯನ್ನು ನನ್ನ ತಂದೆಯವರು ಮಾಡಿರುತ್ತಾರೆಂದರೆ ಸರಿ.

ದಾವಾ ದಾಖಲಿಸುವ ಪೂರ್ವದಲ್ಲಿ ದಾವಾ ಜಮೀನು ನನ್ನ ಸ್ವಾಧೀನದಲ್ಲಿ ಇರುತ್ತದೆ. ನಾವೆಲ್ಲರೂ ಸೇರಿ ಸದರಿ ಜಮೀನಿನಲ್ಲಿ ಉಳುಮೆ ಮಾಡುತ್ತೇವೆಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ನಾನು ಹಿರಿಯ ಮಗನಾಗಿರುವುದರಿಂದ ಮತ್ತು ನನ್ನ ತಂದೆಗೆ ಸರಿಯಾದ ರೀತಿಯಲಿಲ ಕಣ್ಣು ಕಾಣುತ್ತಿರಲಿಲ್ಲ ಆ ಕಾರಣದಿಂದಾಗಿ ನನ್ನ ತಂದೆಯವರು ನನ್ನ ಹೆಸರಿಗೆ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆಂದರೆ ಸುಳ್ಳು. ಸದರಿ ಜಮೀನನ್ನು ಖರೀದಿಸಿದಾಗ ನನ್ನ ಸಹೋದರರು ೮, ೯, ೧೦ ವರ್ಷದವರಿದ್ದರು. ನನ್ನ ಸಹೋದರರು ಸಣ್ಣ ವಯಸ್ಸಿನವರಾಗಿದ್ದರಿಂದ ದಾವಾ ಜಮೀನನ್ನು ನನ್ನ ಹೆಸರಿಗೆ ಖರೀದಿ ಮಾಡಿರುತ್ತಾರೆಂದರೆ ಸುಳ್ಳು. ನನ್ನ ತಂದೆಯವರು ಕೂಡು ಕುಟುಂಬದ ಪರವಾಗಿ ದಾವಾ ಜಮೀನನ್ನು ನನ್ನ ಹೆಸರಿಗೆ ಖರೀದಿಸಿದ್ದರೂ ಸಹಾ ನಾನು ಸದರಿ ಜಮೀನನ್ನು ನಾನೇ ಖರೀದಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾವು ಸೊನ್ನ ಗ್ರಾಮದಲ್ಲಿದ್ದಾಗ ಕೂಡಿದ್ದೆವು ನಾನು ಮುಟುಕನಹಳ್ಳಿ ಗ್ರಾಮಕ್ಕೆ ಬಂದೆ ಅವರು ಸೊನ್ನ ಗ್ರಾಮದಲ್ಲಿ ಉಳಿದುಕೊಂಡರು. ನನ್ನ ಮತ್ತು ನನ್ನ ಸಹೋದರ ಸಹೋದರಿಯರ ನಡುವೆ ಯಾವುದೇ ಪಾಲುವಿಭಾಗವಾಗಿಲ್ಲ. ನನ್ನ ಸಹೋದರ ಸಹೋದರಿಯರು ನನ್ನ ಬಳಿ ಪಾಲುವಿಭಾಗವನ್ನು ಕೇಳಿದರು ಅದಕ್ಕೆ ನಾನು ನಿರಾಕರಿಸಿದ್ದೇನೆಂದರೆ ಸುಳ್ಳು. ದಿಃ14-07-2017 ರಂದು ವಾದಿಯು ನನ್ನ ಬಳಿ ದಾವಾ ಜಮೀನನ್ನು ಪಾಲುವಿಭಾಗ ಮಾಡಿಕೊಡಿ ಅಂತಾ ಹೇಳಿರುತ್ತಾನೆಂದರೆ ಸುಳ್ಳು. ವಾದಿಯು ನನ್ನ ಬಳಿ ಪಾಲು ಕೇಳಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾನು ಈ ದಾವೆಯಲ್ಲಿ ತಕರಾರನ್ನು ಸಲ್ಲಿಸಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಬರೆಯಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ವಾದಿಯು ತನ್ನ ಹೆಂಡತಿ ಮತ್ತು ಅವನ ಹೆಸರಿನಲ್ಲಿ ಹಿರೇಬಗನಾಳ ಗ್ರಾಮದ ಅಲ್ಲಾನಗರದಲ್ಲಿ ಖರೀದಿಸಿರುವ ಆಸ್ತಿಯ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ವಾದಿಯು ಅಲ್ಲಾನಗರದಲ್ಲಿ ವಿವಾಹವಾಗಿರುತ್ತಾನೆ. ವಾದಿಯ ಹೆಂಡತಿಗೆ ಅವರ ತವರುಮನೆಯವರು ಸದರಿ ಆಸ್ತಿಗಳನ್ನು ಕೊಟ್ಟಿರುತ್ತಾರೆಂದರೆ ಸುಳ್ಳು. ವಾದಿಯ ಇಂಡಿಕಾ ಕಾರ್ ವಾಹನ ಮತ್ತು ಟಾಟಾ ಎ ಸಿ ಯ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ನಿಡಿ-೬ ರಿಂದ ೧೦ ರಲ್ಲಿ ತೋರಿಸಿರುವಂತಹ ಆಸ್ತಿಗಳು ವಾದಿ ಮತ್ತು ಅವರ ಹೆಂಡತಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸುಳ್ಳು.

ಮೂಲ ದಾವಾ ಸಂಖ್ಯೆ. 131/2017 ಡಿ ಡಬ್ಲ್ಯೂ 1

2 ನೇ ಪ್ರತಿವಾದಿ ಕಮಲಾಕ್ಷಿ ನನ್ನ ಸಹೋದರನ ಹೆಂಡತಿ ಎಂದರೆ ಸರಿ. 2 ನೇ ಪ್ರತಿವಾದಿ ಅಲ್ಲಾನಗರದಲ್ಲಿ ವಾಸವಾಗಿರುತ್ತಾಳೆ. 2 ನೇ ಪ್ರತಿವಾದಿಗೆ ಆಸ್ತಿ ನಂ.400 ನ್ನು ಸರ್ಕಾರದಿಂದ ಮಂಜೂರು ಮಾಡಿದ ಆಸ್ತಿಯಾಗಿರುತ್ತದೆಂದರೆ ಸುಳ್ಳು. ಸದರಿ ಆಸ್ತಿಗಳು ಸರ್ಕಾರದಿಂದ ಅವರಿಗೆ ಮಂಜೂರಾದ ಆಸ್ತಿಗಳು ಅವುಗಳನ್ನು ಅವರು ಸಂಪಾದಿಸಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಜಮೀನಿನಲ್ಲಿ ನನ್ನ ಸಹೋದರ ಸಹೋದರಿಯರಿಗೆ ಯಾವುದೇ ಹಕ್ಕು ಇಲ್ಲ. ದಾವಾ ಸ್ವತ್ತಿನಲ್ಲಿ ವಾದಿಗೆ ಮತ್ತು ನನ್ನ ಸಹೋದರ ಸಹೋದರಿಯರಿಗೆ ಸಮಪಾಲು ಇದ್ದರೂ ಸಹಾ ದಾವಾ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತು ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿರುವಂತಹ ಆಸ್ತಿಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ